# ಇನ್ಫಿ ಮೂರ್ತಿ ಅಳಿಯ ರಿಷಿ ಬ್ರಿಟನ್‌ನ ಹಣಕಾಸು ಸಚಿವ

**ದೆಹಲಿ:** ಬ್ರಿಟನ್‌ನ ಹಣಕಾಸು ಸಚಿವರಾಗಿ ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಅಳಿಯ ರಿಷಿ ಸುನಕ್ ಅವರು ನೇಮಕಗೊಂಡಿದ್ದಾರೆ. ರಿಷಿ ಸುನಕ್ ಅವರು ಕಳೆದ ವರ್ಷ ಆಗಸ್ಟ್‌ನಲ್ಲಿ ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ನೂತನ ಸಚಿವ ಸಂಪುಟದಲ್ಲಿ ಸೇರ್ಪಡೆಗೊಂಡಿದ್ದರು. 2015ರಲ್ಲಿ ಮೊದಲ ಬಾರಿಗೆ ರಿಷಿ ಅವರು ಸಂಸತ್‌ಗೆ ಆಯ್ಕೆಯಾಗಿದ್ದರು. ಇದಕ್ಕೂ ಮೊದಲು ಅವರು ಖಜಾನೆ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

ಬ್ರಿಟನ್‌ನ ಹಣಕಾಸು ಸಚಿವ ಸಾಜಿದ್ ಜವೀದ್ ಅವರ ದಿಢೀರ್ ರಾಜೀನಾಮೆ ಬೆನ್ನಲ್ಲೇ, ಭಾರತೀಯ ಮೂಲದ ರಿಷಿ ಸುನಕ್ ಅವರನ್ನು ಈ ಮಹತ್ವದ ಹುದ್ದೆಗೆ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಆಯ್ಕೆ ಮಾಡಿದ್ದಾರೆ. ಈ ಮೂಲಕ ಇಂಗ್ಲೆಂಡ್ ಆಡಳಿತದಲ್ಲಿನ ಆಯಕಟ್ಟಿನ ಸ್ಥಳದಲ್ಲಿ ಮತ್ತೊಬ್ಬ ಭಾರತೀಯ ಕುಳಿತಂತಾಗಿದೆ.

ಹಣಕಾಸು ಸಚಿವರಾಗಿ ಆಯ್ಕೆಯಾಗುವ ಮೂಲಕ ರಿಷಿ ಅವರು ಇಂಗ್ಲೆಂಡ್‌ನ ಎರಡನೇ ಆಯಕಟ್ಟಿನ ಹಾಗೂ ಪ್ರಭಾವಿ ಹುದ್ದೆಯನ್ನು ಪಡೆದಿದ್ದಾರೆ. ಆದ್ದರಿಂದ ಇದೀಗ ಅವರು ಪ್ರಧಾನಿ ಬೋರಿಸ್ ಜಾನ್ಸನ್ ಅವರ ಪಕ್ಕದ ಮನೆಯಲ್ಲಿ ವಾಸ ಹೂಡಲಿದ್ದು, ಇದಕ್ಕಾಗಿ ಸಿದ್ಧತೆ ನಡೆಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಿಷಿ ಅವರ ಆಯ್ಕೆಗೆ ಬ್ರಿಟನ್ ರಾಣಿ ಒಪ್ಪಿಗೆ ನೀಡಿದ್ದಾರೆ ಎಂದು ಉನ್ನತ ಮಟ್ಟದ ಅಧಿಕಾರಿಗಳು ತಿಳಿಸಿದ್ದಾರೆ. ರಿಷಿ ಅವರೊಂದಿಗೆ ಇತ್ತೀಚೆಗಷ್ಟೇ ಭಾರತೀಯ ಮೂಲದ ಆಲೋಕ್ ಶರ್ಮಾ ಹಾಗೂ ಸುಲೇಯಾ ಬ್ರವೇರ್ ಮ್ಯಾನ್ ಬೋರಿಸ್ ಅವರ ಕ್ಯಾಬಿನೆಟ್‌ನಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರು.

ರಿಷಿ ಅವರು ಹುಟ್ಟಿ ಬೆಳೆದಿದ್ದು ಇಂಗ್ಲೆಂಡ್‌ನಲ್ಲಾದರೂ ಅವರ ಅಜ್ಜ ಪಂಜಾಬ್ ಮೂಲದವರು. ಇನ್ನು ಅವರು 2009ರಲ್ಲಿ ಅಕ್ಷತಾ ಮೂರ್ತಿ ಅವರನ್ನು ವಿವಾಹವಾದರು. ಅಕ್ಷತಾ ಅವರು ಭಾರತದ ಐಟಿ ದೈತ್ಯ ನಾರಾಯಣ ಮೂರ್ತಿ ಅವರ ಪುತ್ರಿ. ರಿಷಿ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

1980ರಲ್ಲಿ ಹ್ಯಾಂಪ್‌ಶೈರ್‌ನಲ್ಲಿ ಜನಿಸಿದ ರಿಷಿ ಅವರ ತಂದೆ-ತಾಯಿ ಇಂಗ್ಲೆಂಡ್‌ನಲ್ಲಿಯೇ ನೆಲೆಸಿದ್ದರು. 1960ರಲ್ಲಿಯೇ ಭಾರತದಿಂದ ಯುಕೆಗೆ ತೆರಳಿದ ರಿಷಿ ಅವರ ತಂದೆ ಯಶ್ವೀರ್ ವೈದ್ಯರಾಗಿದ್ದು, ತಾಯಿ ಉಷಾ ಫಾರ್ಮಸಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಸುನಕ್ ತಮ್ಮ ಪ್ರಾಥಮಿಕ ಶಾಲೆಯನ್ನು ವಿನ್ಚೆಸ್ಟರ್ ಶಾಲೆಯಲ್ಲಿ ಓದಿ, ಬಳಿಕ ಆಕ್ಸ್‌ಫರ್ಡ್‌ನ ಲಿಕೋಯಿನ್ ಶಾಲೆಯಲ್ಲಿ ಹೆಚ್ಚಿನ ಅಭ್ಯಾಸ ಮಾಡಿದರು. ಬಳಿಕ 2006ರಲ್ಲಿ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು.

2014ರಲ್ಲಿ ರಾಜಕೀಯ ಪ್ರವೇಶ ಮಾಡುವ ಮೊದಲು, ಉದ್ಯಮಿಯಾಗಿದ್ದ ರಿಷಿ ಅವರು ಒಂದು ಬಿಲಿಯನ್ ಪೌಂಡ್‌ನಷ್ಟು ಹೂಡಿಕೆಯನ್ನು ವಿವಿಧ ಕ್ಷೇತ್ರದಲ್ಲಿ ಹೂಡಿಕೆ ಮಾಡಿದ್ದಾರೆ. ರಿಷಿ ಅವರು ಸಣ್ಣ ಕೈಗಾರಿಕೋದ್ಯಮವನ್ನು ಬೆಳೆಸುವಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದು, ಸಣ್ಣ ಕೈಗಾರಿಕೋದ್ಯಮವೇ ಹೆಚ್ಚು ಲಾಭ ತಂದುಕೊಡಲಿವೆ ಎಂದು ನಂಬಿದ್ದಾರೆ.



## ರಾಜಕೀಯದಲ್ಲಿನ ಮೆಟ್ಟಿಲುಗಳು

- 2014ರಲ್ಲಿ ಕನ್ಸರ್‌ವೇಟಿವ್ ಪಕ್ಷದಿಂದ ಸಂಸತ್ತಿಗೆ ಆಯ್ಕೆ
- 2015ರ ಸಾರ್ವತ್ರಿಕ ಚುನಾವಣೆಯಲ್ಲಿ ಸಂಸತ್ತಿಗೆ ಮರು ಆಯ್ಕೆ
- 2015-17ರವರೆಗೆ ಅರಣ್ಯ, ಆಹಾರ ಹಾಗೂ ಗ್ರಾಮೀಣಾಭಿವೃದ್ಧಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ
- 2019ರಲ್ಲಿ ಪ್ರಧಾನಿ ಬೋರಿಸ್ ಜಾನ್ಸನ್ ಸಂಪುಟದಲ್ಲಿ ಖಜಾನೆ ಇಲಾಖೆಯ ಮುಖ್ಯಕಾರ್ಯದರ್ಶಿ ಆಗಿ ಆಯ್ಕೆ
- ಗುರುವಾರ ಹಣಕಾಸು ಸಚಿವರಾಗಿ ಪದೋನ್ನತಿ